ಶ್ರೀ ಕಾಗೋಡು ತಿಮ್ಮಪ್ಪ,—ಇನ್ನೊಂದು ವ್ಯವಸಾಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಷ್ಟು ಮೆಡಿಕಲ್ ಕಾಲೇಜುಗಳು ಇಲ್ಲದಿದ್ದರೂ ಕೇವಲ ರಾಜಕೀಯಕ್ಕೋಸ್ಕರವಾಗಿ ಇನ್ನೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಆಲೋಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್,—ಅದು ಮಾನ್ಯ ಸದಸ್ಯರ ಅಭಿಪ್ರಾಯ ಇರಬಹುದು. ಅಗ್ರಿ ಕಲ್‌ಚರಲ್ ಯೂನಿವರ್ಸಿಟಿಯು ಉದ್ದೇಶ, ಬೇರೆ ಕಾಲೇಜುಗಳನ್ನು ನಡೆಸುವುದಕ್ಕೆ ಮತ್ತು ಪ್ರಮುಖವಾದ ಉದ್ದೇಶ ರಿಸರ್ಚ್ ಮಾಡುವುದಕ್ಕೆಂದು ಮಾನ್ಯ ಸದಸ್ಯರ ಗಮನಕ್ಕೆ ಬಂದಿರಬಹುದು, ಪ್ರತಿಯೊಂದು ಹಳ್ಳಿಹಳ್ಳಿಗೂ ಈ ರಿಸರ್ಚ್ ಕಾರ್ಯ ಮುಟ್ಟಬೇಕೆಂದು ನಮ್ಮ ಉದ್ದೇಶ.

ಶ್ರೀ ಕೆ. ಎಫ್ ಪಾಟೀಲ್,—ಈ ರಾಜ್ಯದ ವಿವಿಧ ಭಾಗಗಳಲ್ಲಿಯೂ ಭೂಗುಣ, ಹವಾಗುಣ, ನೀರಾವರಿ ಅನುಕೂಲತೆ—ಇವುಗಳನ್ನು ನೋಡುವುದಲ್ಲದೆ ಮತ್ತೊಂದು ಯೂನಿವರ್ಸಿಟಿ ರಿಸರ್ಚ್ ಸ್ಟೇಷನ್ ತೆರೆಯಬೇಕೆಂದು ಮಾನ್ಯ ಮಂತ್ರಿಗಳಿಗೆ ಅನೇಕ ಕಡೆಗಳಿಂದ ಮನವಿಗಳು ಬಂದಿರುವುದು ತಮ್ಮ ಗಮನದಲ್ಲಿದೆಯೇ ?

ಶ್ರೀ ಕೆ. ಎಚ್, ಪಾಟೀಲ್,—ಇದನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ,—ಈ ರಿಸರ್ಚ್ ಸ್ಟೇಷನ್ನಿನಲ್ಲಿ ಪರಿಶೋಧನೆಗೆ ಅವಶ್ಯಕವಾಗಿ ಬೇಕಾದಂಥ ಕ್ಯಾಲಿಫೈಡ್ ಸ್ಟೆಂಟಿಸ್ಟ್ಸ್, ಲೈಬ್ರೆರಿ ಎಕ್ವಿಪ್‌ಮೆಂಟ್ಸ್ ಇಲ್ಲ. ಸಬ್‌ಸ್ಟೇಷನ್‌ಗಳಲ್ಲಿ ಬರೀ ಫಾರಸ್ ಮ್ಯಾನೇಜ್ ಮಾಡುತ್ತಿದ್ದಾರೆ. ಅಲ್ಲಿ ಯಾವ ವಿಧವಾದ ರಿಸರ್ಚ್ ವರ್ಕ್ ಸಹ ನಡೆಯುತ್ತಾ ಇಲ್ಲ. ಇದರಿಂದ ರೈತರಿಗೆ ಯಾವ ವಿಧವಾದ ಪ್ರಯೋಜನವೂ ಆಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆದ್ದರಿಂದ ಸ್ಟಾರ್ ಸ್ಟೇಜ್ ರಿಸರ್ಚ್ ಕೇಂದ್ರಗಳನ್ನು ರದ್ದು ಮಾಡಿ ರೀಜನಲ್ ರಿಸರ್ಚ್ ಸ್ಟೇಷನ್‌ಗಳನ್ನು ಬಲಪಡಿಸಿ ಅಲ್ಲಿ ಹೆಚ್ಚು ರಿಸರ್ಚ್ ನಡೆಯುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್, ಪಾಟೀಲ್,—ರೀಜನಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಏನು ಮಾಡುತ್ತಿದ್ದೆಯೋ ಅದರ ಪ್ರಕಾರ ಅಲ್ಲಿಯೂ ಕ್ರಮ ತೆಗೆದುಕೊಳ್ಳಲಾಗುತ್ತದೆ. ಸಣ್ಣ ಸಣ್ಣ ರಿಸರ್ಚ್ ಇನ್‌ಸ್ಟಿಟೂಷನ್‌ಗಳನ್ನು ರದ್ದುಮಾಡುವ ವಿಷಯ ಇನ್ನೂ ತೆಗೆದುಕೊಂಡಿಲ್ಲ.

Levy Paddy in Coorg District

687. Sri G. K. SUBBAIAH (Virajpet).—

Will the Minister of State for Food and Civil Supplies be pleased to state :—

(*a*) the number of quintals of paddy collected as levy in Coorg District during the years of 1969-70, 1970-71, 1971-72 ;

(*b*) the number of quintals of paddy used and the paddy spoiled in godown (Yearwise figures may be furnished) ;

(*c*) the number of quintals of paddy still in the godowns ;

(*d*) the numbers of quintals of wheat stocked in Coorg District from 1969 to 1972 ;

(*e*) the number of quintals of wheat used and the quantity of wheat spoiled during these years ?

Smt. E. E. VAZ (Minister of State for Food and Civil Supplies).—

(*a*) 1969-70 (In Quintals)	1970-71 (In Quintals)	1971-72 (In Quintals)
44,940.64	7,088.60	17,743.52

(*b*) and (*c*) No instance of paddy having been spoiled in godown has been reported. A stock of 1,787 of paddy of 1971-72 season is available.

(*d*) 12,487.53 quintals of wheat of the year 1968-69.

(*e*) 6,386.58 quintals of wheat was utilised and 6,100.95 quintals of wheat which was partially deteriorated, was disposed of by tender sale.

ಶ್ರೀ ಜಿ. ಕೆ. ನುಬ್ಬಯ್ಯ.—ಉತ್ತರದಲ್ಲಿ ಹೇಳಿರುವ ಪ್ರಕಾರ 6 ಸಾವಿರ ಚಿಲ್ಲರೆ ಕ್ವಿಂಟಾಲ್ ಗೋಧಿ ಹಾಳುಕಾ ಆಗಲು ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಅಷ್ಟು ಗೋಧಿ ಸ್ಟಾಕ್ ಹಾಳುಕ ಆಗಲಕ್ಕೆ ಕಾರಣ ಕೆಲವಾಟ್ಟಿಗೆ ಉಂಟಾ. ಅದಕ್ಕಾಗಿಯೇ ಅಲ್ಲಿನ ಜಿಲ್ಲಾಧಿಕಾರಿಗಳ ರಿಪೋರ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. The above stocks of wheat were received at Ponnampet godown during the monsoon season (from 15-6-68 to 13-8-68) and due to bad climatic conditions the stocks became deteriorated. The stocks of wheat (as well as of Milo) were got fumigated on 7-3-1968, 7-10-1968 and 8-10-1968 and on 7-3-1969. The comprehensive disinfestation service had also been got done every month. Thus, timely precautions were taken by the Deputy Commissioner, Coorg District for ths safety of the grains In spite of these precautions, deterioration and infestation set in.

ಶ್ರೀ ಜಿ. ಕೆ. ನುಬ್ಬಯ್ಯ.—ಅದನ್ನು ಮಾರಾಟ ಮಾಡಿದ್ದರಿಂದ ಸರ್ಕಾರಕ್ಕೆ ಹಣ ಎಷ್ಟು ಬಂದಿದೆ ?

ಶ್ರೀಮತಿ ಇ. ಇ. ವಾಜ್.—ಅಲ್ಲಿ ಪಾವತಿ ಮಾಡಿದ ಪ್ರಕಾರ ನುಮಾರು ಒಂದು ಲಕ್ಷ 10 ಸಾವಿರ ಚಿಲ್ಲರೆ ರೂಪಾಯಿ.

ಶ್ರೀ ಜಿ. ಕೆ. ನುಬ್ಬಯ್ಯ.— ಕೊಡಗು ಜಿಲ್ಲೆಯಲ್ಲಿ ಗೋಧಿ ಹೆಚ್ಚಿಗೆ ಹೊಂದಿಲ್ಲದೇ ಇರುವುದರಿಂದ, ಮಾರಾಟ ಆಗುವುದಕ್ಕೆ ಅದು ಇಲ್ಲದೇ ಇರುವುದನ್ನು ತಾವು ಒಪ್ಪುತ್ತೀರಾ ? ಅಲ್ಲಿ ಆಹಾರಕ್ಕೆ ಬರೀ ಅಕ್ಕಿಯನ್ನೇ ಉಪಯೋಗಿನುವುದರಿಂದ ಗೋಧಿ ಹೆಚ್ಚಿಗೆ ಉಪಯೋಗ ಆಲ್ಲಿ ಆಗದೇ ಇರುವುದರಿಂದ ಮತ್ತು ಗೋಧಿ ಅಷ್ಟು ಅಲ್ಲಿ ಹಾಳಾಗಿ ಹೋಗಿದೆಯೆಂಬುದನ್ನು ಒಪ್ಪುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಎಷ್ಟು ಅಗತ್ಯವಿದೆಯೋ ಅಷ್ಟನ್ನು ಕಳುಹಿಸುತ್ತೇವೆ, ಈಗ ಅದಷ್ಟು ಅಕ್ಕಿ ಕೊಟ್ಟು ಗೋಧಿಯನ್ನು ಕಡಿಮೆ ಕೊಡುತ್ತೇವೆ.

ಶ್ರೀ ಜಿ. ಕೆ. ನುಬ್ಬಯ್ಯ.—ಈಗಲಾದರೂ ಎಲ್ಲ ಗೋಧಿ ಬೆಳೆಯುವುದಿಲ್ಲ ಅಲ್ಲಿಗೆ ಜೋಳ ವಾದರೂ ಕಳುಹಿಸಿ, ಎಲ್ಲಿ ಅಗತ್ಯವಾಗಿ ಗೋಧಿ ಬೇಕಾಗುತ್ತದೋ ಅಲ್ಲಿಗೆ ಅದನ್ನು ಎಷ್ಟು ಸಾಧ್ಯವೋ ಅಷ್ಟನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಪ್ರತಿಯೊಂದು ಕಡೆಗಳಲ್ಲಿಯೂ ಎಲ್ಲ ಗೋಧಿ ಕಡಿಮೆ ಇದೆಯೋ ಅಲ್ಲಿಗೆ ಕೊಡುತ್ತಿದ್ದೇವೆ. ನಮ್ಮಲ್ಲ ಗೋಧಿ ಕಡಿಮೆ ಪ್ರಮಾಣದಲ್ಲರುವುದರಿಂದ ಅದು ಬೇಡ ಎಂದು ಹೇಳುವ ಕಡೆಗಳಲ್ಲಿ ಅದನ್ನು ಕಳುಹಿಸುವುದಕ್ಕೆ ಸರ್ಕಾರ ಖಂಡಿತವಾಗಿಯೂ ತಯಾರು ಇಲ್ಲ.